CAREERINDIA

SL. No. : X

ಒಟ್ಟು ಪ್ರಶ್ನೆಗಳ ಸಂಖ್ಯೆ : 64 ]
Total No. of Questions : 64 ]
**ಸಂಕೇತ ಸಂಖ್ಯೆ : 01-K**

**CCE PF**
**CCE PR**

[ ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 8
[ Total No. of Printed Pages : 8
**Code No. : 01-K**

# ವಿಷಯ : ಪ್ರಥಮ ಭಾಷೆ — ಕನ್ನಡ

# Subject : First Language — KANNADA

**(ಹೊಸ ಪಠ್ಯಕ್ರಮ / New Syllabus)**

**(ಖಾಸಗಿ ಅಭ್ಯರ್ಥಿ + ಪುನರಾವರ್ತಿತ ಖಾಸಗಿ ಅಭ್ಯರ್ಥಿ / Private Fresh + Private Repeater)**

ದಿನಾಂಕ : 30. 03. 2017 ] [ Date : 30. 03. 2017
ಸಮಯ : ಬೆಳಿಗ್ಗೆ 9-30 ರಿಂದ 12-45 ರವರೆಗೆ ] [ Time : 9-30 A.M. to 12-45 P.M.
ಗರಿಷ್ಠ ಅಂಕಗಳು : 125 ] [ Max. Marks : 125

***ಪರೀಕ್ಷಾರ್ಥಿಗಳಿಗೆ ಸಾಮಾನ್ಯ ಸೂಚನೆಗಳು :***

1. ಈ ಪ್ರಶ್ನೆಪತ್ರಿಕೆಯು 64 ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳನ್ನು ಹೊಂದಿದೆ.

2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.

3. ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.

4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.

5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ಕೊಡಲಾಗಿದೆ.

ಇಲ್ಲಿಂದ ಕತ್ತರಿಸಿ

**TEAR HERE TO OPEN THE QUESTION PAPER**
ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ

**Tear here**

www.careerindia.com

CAREERINDIA



## ವಿಭಾಗ – 'ಎ'

### (ಪಠ್ಯಗಳ ಅಧ್ಯಯನ – ಗದ್ಯ, ಪದ್ಯ, ಪೋಷಕ ಅಧ್ಯಯನ)

**ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ :** 16 × 1 = 16

1. ರಾಮಲಕ್ಷ್ಮಣರಿಗೆ ಮತಂಗಾಶ್ರಮಕ್ಕೆ ಹೋಗಲು ಸೂಚಿಸಿದವರು ಯಾರು ?
2. ವಿ.ಕೃ. ಗೋಕಾಕರ ಪ್ರಕಾರ ಗೃಹಸ್ಥಾಶ್ರಮ ಧನ್ಯ ಎಂದು ಹೇಳಿದವರು ಯಾರು ?
3. 'ತನ್ನಂತೆ ಪರರ ಬಗೆದೊಡೆ ಕೈಲಾಸ ಬಿನ್ನಾಣಮಕ್ಕು' ಎಂದು ಹೇಳಿದವರು ಯಾರು ?
4. ನಾಡ ಭವ್ಯ ಜನರು ಬುಕ್ಕರಾಯನ ಬಳಿ ಏನೆಂದು ಭಿನ್ನಹ ಮಾಡಿದರು ?
5. ಧರ್ಮಾಧಿಕರಣರು ಸಾಕ್ಷಿ ಕೇಳಲು ಯಾರ ಬಳಿಗೆ ಹೋದರು ?
6. ಹಸಿದು ಮಲಗಿದ್ದ ಹುಲಿಯ ಮನಸ್ಸಿನಲ್ಲಿ ಬಂದ ಯೋಚನೆ ಯಾವುದು ?
7. ಗಂಗೆಯ ಪೆರ್ಮಗ ಯಾರು ?
8. ಹಕ್ಕಿಯು ಯಾವುದನ್ನು ತೇಲಿಸಿ ಮುಳುಗಿಸಿದೆ ?
9. ಮಾನವನ ಸ್ವಭಾವವನ್ನು ಬಸವಣ್ಣನವರು ಯಾವುದಕ್ಕೆ ಹೋಲಿಸಿದ್ದಾರೆ ?
10. ಕವಿ ಜಿ.ಎಸ್. ಶಿವರುದ್ರಪ್ಪನವರ ಪ್ರಕಾರ ಪ್ರತಿಯೊಬ್ಬ ಮನುಷ್ಯನು ಯಾವ ಎಚ್ಚರದಲ್ಲಿ ಬದುಕಬೇಕಿದೆ ?
11. ಕವಿ ಜಿ.ಎಸ್. ಶಿವರುದ್ರಪ್ಪನವರು ಯಾವುದಕ್ಕೆ ಮುಂಗಾರಿನ ಮಳೆಯಾಗಬೇಕೆಂದಿದ್ದಾರೆ ?
12. ಅಶ್ವಿನಿದೇವತೆಗಳ ವರಬಲದಿಂದ ಜನಿಸಿದವರು ಯಾರು ?
13. ಒಡಲು ಅನುಭವಿಸುವ ಸಂಕಟಕೆ ಯಾವುದು ಇಲ್ಲ ?
14. ದು. ಸರಸ್ವತಿಯವರ ಪ್ರಕಾರ ಜೀವ ತೆಗೆದವರು ಏನೆಂದು ಕರೆಯಲ್ಪಡುತ್ತಾರೆ ?
15. ಬೇಡನು ಬೀಸಿದ ಬಲೆಗೆ ಮೊದಲು ಸಿಲುಕಿದವರು ಯಾರು ?
16. ಸು.ರಂ. ಎಕ್ಕುಂಡಿಯವರ ಪ್ರಕಾರ ಏನನ್ನು ತೊರೆದು ಬಾಳಬೇಕು ?

**ಈ ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ :** 16 × 2 = 32

17. ಗೋಕಾಕರು ಹೇಳಿರುವಂತೆ ಸಾಧಕನ ಯೋಗಕ್ಷೇಮವನ್ನು ಸಮಾಜ ಹೇಗೆ ನಿರ್ವಹಿಸುತ್ತಿತ್ತು ?
18. ಜೈನಧರ್ಮದ ರಕ್ಷಣೆಗಾಗಿ ಬುಕ್ಕರಾಯನು ಕೈಗೊಂಡ ಕ್ರಮಗಳೇನು ?
19. ಬುಕ್ಕರಾಯನು ವೈಷ್ಣವ ಮತ್ತು ಜೈನರ ನಡುವಿನ ಸಂವಾದವನ್ನು ಹೇಗೆ ಬಗೆಹರಿಸಿದನು ?
20. ವಚನಧರ್ಮದ ಬಗೆಗೆ ದೇವನೂರರ ಅಭಿಪ್ರಾಯವೇನು ?
21. ದುಷ್ಟಬುದ್ಧಿಯು ತನ್ನ ತಂದೆಗೆ ಏಕಾಂತದಲ್ಲಿ ಹೇಳಿದ ಪ್ರಸಂಗವನ್ನು ತಿಳಿಸಿ.
22. ದುಷ್ಟಬುದ್ಧಿಯ ಹೀನಕೃತ್ಯವನ್ನು ಧರ್ಮಬುದ್ಧಿಯು ಹೇಗೆ ಬಯಲಿಗೆಳೆದನು ?
23. ಹುಲಿಯು ಹಿಂದಿನಿಂದ ಹಾರಿ ಕೊಲ್ಲದಿರಲು ಕಾರಣವೇನು ?
24. ಖರ್ದಿ ಪುಸ್ತಕವನ್ನು ಕುರಿತು ಲೇಖಕರು ಹೇಳಿದ ಮಾತುಗಳನ್ನು ತಿಳಿಸಿ.
25. ಹಲಗಲಿಯ ಬೇಡರು ದಂಗೆ ಏಳಲು ಕಾರಣವೇನು ?

www.careerindia.com

CAREERINDIA



26. ಭಕ್ತಿ ಮತ್ತು ನಿಷ್ಠೆಯ ಬಗ್ಗೆ ಜೇಡರದಾಸಿಮಯ್ಯನವರ ಅಭಿಪ್ರಾಯವೇನು ?
27. ಕುದುರೆಯನ್ನು ಕಟ್ಟುವ ವಿಚಾರದಲ್ಲಿ ಮುನಿಸುತರಿಗೂ ಲವನಿಗೂ ನಡೆದ ಸಂವಾದವನ್ನು ಬರೆಯಿರಿ.
28. 'ನನ್ನಾಸೆ' ಕವನದಲ್ಲಿ ಕವಯಿತ್ರಿಯು ಯಾವ ಕಾರಣಗಳಿಗಾಗಿ ಚಿಲುಮೆ ಹಾಗೂ ಊರುಗೋಲಾಗಲು ಆಸೆ ಪಡುತ್ತಾರೆ ?
29. ಹೆಚ್. ನರಸಿಂಹಯ್ಯನವರ ಪ್ರಕಾರ ವೈಜ್ಞಾನಿಕ ಸಂಶೋಧನೆಗಳು ಯಾವಾಗ ಅರ್ಥರಹಿತವಾಗುತ್ತವೆ ?
30. ಲೇಖಕಿ ಆರ್. ನಿರ್ಮಲ ತಮ್ಮ ಹೆಸರಿನ ನಾಮಫಲಕ ಬರೆಸಲು ಆಸೆಪಟ್ಟವರಲ್ಲ. ಏಕೆ ?
31. ಅಂಬೇಡ್ಕರರ ಪ್ರಕಾರ ರಾಜಕೀಯ ಸ್ವಾತಂತ್ರ್ಯದ ಮಹತ್ವವನ್ನು ತಿಳಿಸಿ.
32. 'ತಲೆಕೂದಲು' ಎಂಬ ಉತ್ತರ ಬರಲು ಜನಪದರು ಹೇಳಿರುವ ಒಗಟನ್ನು ಬರೆಯಿರಿ.

**ಈ ಕೆಳಗಿನ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ :** $6 \times 3 = 18$

33. "ಅವರ ಸಾಧನೆಯ ಕಿರೀಟಕ್ಕೆ ಮತ್ತೊಂದು ಗರಿಯನ್ನು ಸೇರಿಸಿತು"
34. "ಶಿಕ್ಷಣಕ್ಕಾಗಿ ಶಿಕ್ಷಣವಿರಬೇಕು. ಅದು ಕೆಲವೇ ಜನರ ಸ್ವತ್ತಾಗದೆ ಪ್ರಗತಿಪರ ರಾಜ್ಯದಲ್ಲಿ ಎಲ್ಲರ ಆಜನ್ಮಸಿದ್ಧ ಹಕ್ಕಾಗಬೇಕು"
35. "ಹಾಗಾದರೆ ಎಲ್ಲರಿಗೂ ಮನೆ ಆಗುವವರೆಗೆ ನನಗೂ ಮನೆ ಬೇಡ"
36. "ಕೆಟ್ಟು ವರ್ಣಿಸಿ ಹೇಳಿದೆ ಕಂಡಷ್ಟು"
37. "ಹೊಸ ಭರವಸೆಗಳ ಕಟ್ಟೋಣ"
38. "ಹಲವು ಕೊಂಬೆಗೆ ಹಾಯುತಲಿದೆ"

**ಈ ಕೆಳಗಿನ ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಪ್ರಶಸ್ತಿ / ಬಿರುದುಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ :** $2 \times 3 = 6$

39. ಪು.ತಿ. ನರಸಿಂಹಾಚಾರ್ಯ
40. ಲಕ್ಷ್ಮೀಶ
41. **ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ :** $1 \times 4 = 4$

ಕೊರಳ ಸೆರೆ ಹಿಗ್ಗಿದವು ದೃಗುಜಲ

..........................................................................

..........................................................................

..........................................................................

..........................................................................

ನರುಹಿ ಕೊಂದನು ಹಲವು ಮಾತೇನೆಂದು ಚಿಂತಿಸಿದ.

**ಅಥವಾ**



www.careerindia.com

CAREERINDIA



ಮಾರಿಗೌತಣವಾಯ್ತು ನಾಳಿನ

..........................................................................

..........................................................................

..........................................................................

..........................................................................

ವೀರರ್ಧೈವರ ನೋಯಿಸೆನು ರಾಜೀವಸಖನಾಣೆ.

42. **ಈ ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ :** 1 × 4 = 4

ಯುಗಯುಗಗಳ ಹಣೆ ಬರೆಹವ ಒರಸಿ

ಮನ್ವಂತರಗಳ ಭಾಗ್ಯವ ತೆರೆಸಿ

ರೆಕ್ಕೆಯ ಬೀಸುತ ಚೇತನಗೊಳಿಸಿ

ಹೊಸಗಾಲದ ಹಸುಮಕ್ಕಳ ಹರಸಿ

ಹಕ್ಕಿ ಹಾರುತಿದೆ ನೋಡಿದಿರಾ ?

**ಈ ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ :** 2 × 4 = 8

43. ವಿದ್ಯುತ್ ಒಲೆಯಿಂದ ಉಂಟಾಗಬಹುದಾಗಿದ್ದ ಅಪಾಯವನ್ನು ಗೊರೂರರು ಹೇಗೆ ಪರಿಹರಿಸಿಕೊಂಡರು ?

***ಅಥವಾ***

ಖಾದಿ ಬಟ್ಟೆಯ ವೈಶಿಷ್ಟ್ಯವನ್ನು ಗೊರೂರರು ಅಮೆರಿಕದ ಉಪಾಧ್ಯಾಯರು ಮತ್ತು ವಿದ್ಯಾರ್ಥಿಗಳಿಗೆ ಹೇಗೆ ಪರಿಚಯಿಸಿದರು ?

44. ಧೃತರಾಷ್ಟ್ರನು ಸಂಧಿ ಮಾಡಿಕೊ ಎಂದು ದುರ್ಯೋಧನನಿಗೆ ಹೇಳಲು ಕಾರಣವೇನು ?

***ಅಥವಾ***

ದುರ್ಯೋಧನನ ತಂದೆ–ತಾಯಿಯರು ಅವನನ್ನು ಸಂಧಿಗಾಗಿ ಪ್ರಾರ್ಥಿಸಿದ ರೀತಿಯನ್ನು ವಿವರಿಸಿ.

45. **ಈ ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ :** 2 × 2 = 4

ಆಲೂರು ವೆಂಕಟರಾಯರು ಅಖಂಡ ಕರ್ನಾಟಕದ ಕನಸನ್ನು ನನಸಾಗಿಸಲು ಹೋರಾಟ ನಡೆಸುತ್ತಾ ಸ್ವತಂತ್ರ ಭಾರತದ ಹೋರಾಟದಲ್ಲಿಯೂ ಭಾಗವಹಿಸಿದ್ದರು. ಭಾರತವನ್ನು ಬಿಟ್ಟು ಕರ್ನಾಟಕವಿಲ್ಲ; ಕರ್ನಾಟಕವನ್ನು ಬಿಟ್ಟು ಭಾರತವಿಲ್ಲ ಎಂಬುದು ಅವರ ಸ್ಪಷ್ಟ ನಿಲುವಾಗಿತ್ತು. ಅಂದು ವಿದೇಶಿ ವಸ್ತುಗಳ ಮಾರಾಟದಿಂದ ಸ್ವದೇಶಿ ವಸ್ತುಗಳ ಮಾರಾಟ ಕಡಿಮೆಯಾಗಿ ನಮ್ಮ ಅನೇಕ ಕೈಗಾರಿಕೆಗಳು ಮೂಲೆ ಸೇರುತ್ತಾ



www.careerindia.com

CAREERINDIA



ಬಂದವು. ಇದನ್ನು ಪ್ರತಿಭಟಿಸಲು ತಲೆ ಎತ್ತಿದ ವಿದೇಶಿ ವಸ್ತುಗಳ ಬಹಿಷ್ಕಾರ, ಸ್ವದೇಶಿ ವಸ್ತುಗಳ ಪುರಸ್ಕಾರ ಚಳುವಳಿಯಲ್ಲಿ ದುಮುಕಿ ಮಂಗಳೂರು ಹೆಂಚು ಮತ್ತು ಸೀಸದ ಕಡ್ಡಿ ತಯಾರಿಸುವ ಕಾರ್ಖಾನೆಗಳ ಸ್ಥಾಪನೆಗೆ ಜನರನ್ನು ಹುರಿದುಂಬಿಸಿದರಲ್ಲದೆ ತಾವೂ ಸ್ಥಾಪಿಸಿ ಅವರಿಗೆ ಮಾದರಿಯಾದರು. ಮಕ್ಕಳ ವ್ಯಕ್ತಿತ್ವವನ್ನು ರೂಪಿಸುವುದರಲ್ಲಿ ಶಿಕ್ಷಣದ ಪಾತ್ರ ಬಹಳ ದೊಡ್ಡದು. ಆದರೆ ಭಾರತೀಯರು ಪಡೆಯುತ್ತಿದ್ದ ಶಿಕ್ಷಣ ಅವರಿಗೆ ಸ್ವದೇಶವನ್ನೂ, ಸ್ವದೇಶ ಸಂಸ್ಕೃತಿಯನ್ನು ಮರೆಸುತ್ತಲಿದ್ದಿತು. ಈ ಅಪಾಯವನ್ನು ತಪ್ಪಿಸಲು ನಮ್ಮ ದೇಶ ನಮ್ಮ ಸಂಸ್ಕೃತಿಗಳನ್ನು ಪೋಷಿಸುವ 'ರಾಷ್ಟ್ರೀಯ ಶಿಕ್ಷಣ ಚಳುವಳಿ'ಯು ಆಗ ಭಾರತದಲ್ಲೆಲ್ಲಾ ವ್ಯಾಪಿಸಿದ್ದಿತು. ವೆಂಕಟರಾಯರು ಈ ಚಳುವಳಿಯಲ್ಲಿಯೂ ದುಮುಕಿ ಧಾರವಾಡದಲ್ಲಿ 'ಕರ್ನಾಟಕ ನೂತನ ವಿದ್ಯಾಲಯ' ಎಂಬ ರಾಷ್ಟ್ರೀಯ ವಿದ್ಯಾಲಯವನ್ನು ಸ್ಥಾಪಿಸಿದರು.

*ಪ್ರಶ್ನೆಗಳು :*

ಅ) ಆಲೂರು ವೆಂಕಟರಾಯರು ಸ್ವದೇಶಿ ಚಳುವಳಿಯ ಮೂಲಕ ಹೇಗೆ ಮಾದರಿ ಎನಿಸಿದರು ?

ಆ) ಆಲೂರು ವೆಂಕಟರಾಯರು ರಾಷ್ಟ್ರೀಯ ವಿದ್ಯಾಲಯವನ್ನು ಸ್ಥಾಪಿಸಲು ಕಾರಣವೇನು ?

## ವಿಭಾಗ – 'ಬಿ'

### (ಅನ್ವಯಿಕ ವ್ಯಾಕರಣ, ಅಲಂಕಾರ ಹಾಗೂ ಛಂದಸ್ಸು)

**ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ :** $10 \times 1 = 10$

46. 'ಇರುಳಳಿದು' ಪದವು ಈ ಸಂಧಿಗೆ ಉದಾಹರಣೆಯಾಗಿದೆ

    (ಎ) ಲೋಪ ಸಂಧಿ (ಬಿ) ಆದೇಶ ಸಂಧಿ

    (ಸಿ) ಆಗಮ ಸಂಧಿ (ಡಿ) ಯಣ್ ಸಂಧಿ

47. ಅನೇಕ ಉಪವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನವಾಗಿದ್ದಾಗ ಉಪವಾಕ್ಯಗಳು ಮುಗಿದಾಗಲೆಲ್ಲಾ ಬರುವ ಲೇಖನ ಚಿಹ್ನೆ

    (ಎ) ಅಲ್ಪವಿರಾಮ (ಬಿ) ಅರ್ಧವಿರಾಮ

    (ಸಿ) ಭಾವಸೂಚಕ (ಡಿ) ವಾಕ್ಯವೇಷ್ಟನ

48. 'ತತ್ಪುರುಷ' ಸಮಾಸಕ್ಕೆ ಸೂಕ್ತ ಉದಾಹರಣೆ ಇದಾಗಿದೆ

    (ಎ) ಕಟ್ಟೇಕಾಂತ (ಬಿ) ಸಾಕ್ಷಿಮಾಡಿ

    (ಸಿ) ಪರಧನ (ಡಿ) ನೆಯ್ದುವಸ್ತ್ರ

49. 'ಜಾಣತನ' ಪದವು ಈ ವ್ಯಾಕರಣಾಂಶಕ್ಕೆ ಸೇರಿದೆ

    (ಎ) ತದ್ಧಿತಾಂತಾವ್ಯಯ (ಬಿ) ತದ್ಧಿತಾಂತನಾಮಪದ

    (ಸಿ) ಕೃದಂತಭಾವನಾಮ (ಡಿ) ತದ್ಧಿತಾಂತಭಾವನಾಮ

50. 'ಪರಿಮಾಣ ವಾಚಕ'ಕ್ಕೆ ಉದಾಹರಣೆಯಾದ ಪದವಿದು

    (ಎ) ಹಲವು (ಬಿ) ಹಳತು

    (ಸಿ) ಹಿರಿಮೆ (ಡಿ) ಒಳ್ಳೆಯ



www.careerindia.com

CAREERINDIA



51. ಒಂದು ನಿಶ್ಚಯಾರ್ಥದಲ್ಲಿರುವ ಅವ್ಯಯವನ್ನು ಹೀಗೆನ್ನುತ್ತೇವೆ

(ಎ) ಸಂಬಂಧಾರ್ಥಕ (ಬಿ) ಅವಧಾರಣಾರ್ಥಕ

(ಸಿ) ಕ್ರಿಯಾರ್ಥಕ (ಡಿ) ಸಾಮಾನ್ಯಾರ್ಥಕ

52. 'ತಿನ್ನು' ಪದದ ಸಂಭಾವನಾರ್ಥಕ ಕ್ರಿಯಾರೂಪ

(ಎ) ತಿನ್ನನು (ಬಿ) ತಿನ್ನಲಿ

(ಸಿ) ತಿಂದಾನು (ಡಿ) ತಿನ್ನೋಣ

53. 'ಪಂಚಮಿ ವಿಭಕ್ತಿ'ಯ ಕಾರಕಾರ್ಥ ಇದು

(ಎ) ಸಂಬಂಧ (ಬಿ) ಅಧಿಕರಣ

(ಸಿ) ಸಂಪ್ರದಾನ (ಡಿ) ಅಪಾದಾನ

54. 'ಕೃದಂತಭಾವನಾಮಕ್ಕೆ' ಸೂಕ್ತ ಉದಾಹರಣೆ ಇದಾಗಿದೆ

(ಎ) ಬಾಳುವಿಕೆ (ಬಿ) ಬಾಳಲು

(ಸಿ) ಬಾಳಲಿಕ್ಕೆ (ಡಿ) ಬಾಳದ

55. ಒಂದು ಅಥವಾ ಅನೇಕ ವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನಗಳಾಗಿದ್ದರೆ ಅಂತಹ ವಾಕ್ಯವು

(ಎ) ಸಂಯೋಜಿತ ವಾಕ್ಯ (ಬಿ) ಸಾಮಾನ್ಯ ವಾಕ್ಯ

(ಸಿ) ಮಿಶ್ರ ವಾಕ್ಯ (ಡಿ) ಪ್ರಶ್ನಾರ್ಥಕ ವಾಕ್ಯ

**ಈ ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಹೊಂದುವ ಸಂಬಂಧೀ ಪದವನ್ನು ಬರೆಯಿರಿ :** $4 \times 1 = 4$

56. ಮಕ್ಕಳುಮರಿ : ಜೋಡುನುಡಿ :: ತಿರುತಿರುಗಿ : ......................... .

57. ನೀರದ : ಮೋಡ :: ಪನ್ನಗ : ......................... .

58. ವಿದ್ಯಾಧರ : ಬಿಜ್ಜೋಧರ :: ಕುಠಾರ : ......................... .

59. ಕಾರ್ಖಾನೆ : ಹಿಂದೂಸ್ಥಾನಿ :: ಚೊಂಬು : ......................... .

60. **ಈ ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ :** $1 \times 3 = 3$

ತೆಗೆದುತ್ತರೀಯಮಂ ಮುರಿದು ಕುದುರೆಯ ಗಳಕೆ
ಬಿಗಿದು ಕದಳೀದ್ರುಮಕೆ ಕಟ್ಟಲ್ಕೆ ಮುನಿಸುತರ್
ಮಿಗೆ ನಡುಗಿ ಬೇಡಬೇಡರಸುಗಳ ವಾಜಿಯಂಬಿಡು ಬಡಿವರೆಮ್ಮನೆನಲು.

***ಅಥವಾ***

ಕುರುಡರುಮೆನ್ನದೆಮ್ಮ ನುಡಿಗೇಳ್ ಮಗನೇ ಬಗೆ ತಂದೆಗಿಂಬುಕೆಯ್.



www.careerindia.com

CAREERINDIA



61. **ಈ ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯಗೊಳಿಸಿ :** $1 \times 3 = 3$

'ನುಡಿದರೆ ಸ್ಫಟಿಕದ ಶಲಾಕೆಯಂತಿರಬೇಕು'

*ಅಥವಾ*

ಅಳ್ಳಿರಿಯುತಿಪ್ಪ ಎಮ್ಮ ಒಡಲ ಬೇಗೆಯ ಬೆಂಕಿಯುರಿ ನಿನ್ನನಿರಿಯದೆ ಪೇಳು ವಿಶ್ವಾಮಿತ್ರ.

## ವಿಭಾಗ – 'ಸಿ'

## (ವಾಕ್ಯರಚನೆ ಹಾಗೂ ಬರೆವಣಿಗೆ ಕೌಶಲ)

62. **ಈ ಕೆಳಗೆ ಕೊಟ್ಟಿರುವ ಗಾದೆಗಳಲ್ಲಿ ಯಾವುದಾದರೂ ಒಂದನ್ನು ವಿಸ್ತರಿಸಿ ಬರೆಯಿರಿ :** $1 \times 3 = 3$

 * ಕುಳಿತು ಉಣ್ಣುವವನಿಗೆ ಕುಡಿಕೆ ಹೊನ್ನು ಸಾಲದು.
 * ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೆ.
 * ಮಾಡಿದ್ದುಣ್ಣೋ ಮಹಾರಾಯ.

63. ನಿಮ್ಮನ್ನು ಮೈಸೂರಿನ ಜ್ಞಾನಭಾರತಿ ಪ್ರೌಢಶಾಲೆಯ 'ತುಷಾರ್' ಎಂದು ಭಾವಿಸಿಕೊಂಡು, ನಿಮ್ಮ ಶಾಲೆಯಲ್ಲಿ ಆಚರಿಸಿದ 'ಭಾಷಾ ಮಾಸಾಚರಣೆ'ಯ ಸಮಾರೋಪ ಸಮಾರಂಭದ ಕಾರ್ಯಕ್ರಮದ ವರದಿಯನ್ನು ಪ್ರಕಟಿಸುವಂತೆ ಕೋರಿ 'ವಿಜಯವಾಣಿ' ದಿನಪತ್ರಿಕೆಯ ಸಂಪಾದಕರಿಗೆ ಮನವಿ ಪತ್ರವೊಂದನ್ನು ಬರೆಯಿರಿ. $1 \times 5 = 5$

*ಅಥವಾ*

ನಿಮ್ಮನ್ನು ರಾಮನಗರದ ವಿದ್ಯಾರಣ್ಯ ಬಡಾವಣೆಯಲ್ಲಿ ವಾಸವಾಗಿರುವ 'ಕುಮುದಿನಿ' ಎಂದು ಭಾವಿಸಿಕೊಂಡು, ಶೈಕ್ಷಣಿಕ ಪ್ರವಾಸದ ವಿವರವನ್ನು ತಿಳಿಸಿ ದಾವಣಗೆರೆಯ ಬಸವೇಶ್ವರ ನಗರದಲ್ಲಿ ವಾಸವಾಗಿರುವ ಅಕ್ಕ 'ಮಧುರ'ಳಿಗೆ ಪತ್ರವೊಂದನ್ನು ಬರೆಯಿರಿ.

64. **ಈ ಕೆಳಗಿನ ವಿಷಯಗಳಲ್ಲಿ ಯಾವುದಾದರೂ ಒಂದನ್ನು ಕುರಿತು ಹದಿನೈದು ವಾಕ್ಯಗಳಿಗೆ ಕಡಿಮೆ ಇಲ್ಲದಂತೆ ಪ್ರಬಂಧ ಬರೆಯಿರಿ :** $1 \times 5 = 5$

 * ಸಾವಯವ ಬೇಸಾಯದ ಪ್ರಾಮುಖ್ಯತೆ
 * ವಿದ್ಯಾರ್ಥಿಗಳ ಜ್ಞಾನಾಭಿವೃದ್ಧಿಯಲ್ಲಿ ಮೊಬೈಲ್ ಫೋನ್‌ಗಳ ಸದ್ಬಳಕೆ
 * ಅತೀವೃಷ್ಟಿ ಮತ್ತು ಅನಾವೃಷ್ಟಿಯ ಪರಿಣಾಮ

www.careerindia.com

www.careerindia.com